ಎಂದೆ.

'ಇಲ್ಲಿ ಏಕೆ ಬೇಡ? ಇಲ್ಲೇನು ಕೆಡುಕಿದೆ?'

'ಇಲ್ಲಿ ಬೇಡ ಅಂತ ಹೇಳಿದೆನಲ್ಲ', ನಾನು ಪ್ರತಿವಾದ ಮಾಡಿದೆ.

'ಆದ್ರೆ ಏಕೆ? ಬೇರೆ ಕಡೆ ಏಕೆ? ಇದು ಸಹ ಒಂದು ಒಳ್ಳೆಯ ಮನೆಯೇ ಆಗಿದೆ.' ರಿತಿಕ್ ಆಶ್ಚರ್ಯದಿಂದ ಕೇಳಿದ.

'ಏಕೆಂದರೆ, ನಾನಿಲ್ಲಿ ನಿನ್ನನ್ನು ನನ್ನ ದತ್ತಕ ಸಹೋದರ ಅಂತ ಹೇಳಿದ್ದೇನೆ.' ನಾನು ತಡಬಡಿಸಿದೆ.

'ದತ್ತಕ ಸಹೋದರ? ವಾಟ್ ಎ ಫನ್ನಿ ರಿಲೇಶನ್, ದತ್ತಕ ಸಹೋದರ'! ರಿತಿಕ್ ನಕ್ಕ.

ನಾನು ರೇಗಿದೆ.

'ಹೀಗಂತ ಮೊದಲೇ ಹೇಳಿದ್ದೆ.' ನಾನು ಅನವಶ್ಯಕವಾಗಿ ಸ್ಪಷ್ಟೀಕರಣ ಕೊಟ್ಟೆ.


'ಓಕೆ, ನಾನು ಬೇರೆ ಕಡೆ ಮನೆ ಹುಡುಕ್ತೀನಿ, ದತ್ತಕ ಸಹೋದರ...' ರಿತಿಕ್‌ನ ನಗು ನಿಲ್ಲುತ್ತಲೇ ಇರಲಿಲ್ಲ. ಒಂದು ವೇಳೆ ರಿತಿಕ್ ನನ್ನ ಜಾಗದಲ್ಲಿ ಇದ್ದಿದ್ದರೆ ಏನು ಮಾಡುತ್ತಿದ್ದ ಎಂದು ಯೋಚಿಸಿದೆ. ಆಗ ಇವನು ಹೆಗಲು ಕುಣಿಸುತ್ತಾ, ನಾನು ಇವಳ ಪ್ರೇಮಿ, ನಮ್ಮಿಬ್ಬರ ನಡುವೆ ದೈಹಿಕ ಸಂಬಂಧವಿದೆ ಎಂದು ಹೇಳುತ್ತಿದ್ದನೆ? ರಿತಿಕ್ ತನ್ನ ಮಿತ್ರರಿಗೆ, ತನ್ನ ಕಚೇರಿಯ ಜನರಿಗೆ ನನ್ನ ಬಗ್ಗೆ ಹೇಳಿರುವನೇ?

ರಿತಿಕ್ ಎಷ್ಟಾದರು ರಿತಿಕ್‌ನೇ, ತನ್ನ ತಲೆಯ ಕಿರೀಟವನ್ನು ತನ್ನ ಕೈಯಿಂದ ಇಳಿಸಿ ಜೋಜೆಫೈನ್‌ನ ತಲೆಯ ಮೇಲಿಡಲು ರಿತಿಕ್ ನೆಪೋಲಿಯನ್ ಅಲ್ಲ. ಸರಿ, ಅವನು ಯಾವ ಬಿಸಿಗೆ ಒಳಗಾಗಿ ಜೊತೆಯಲ್ಲಿರುವ ಬಗ್ಗೆ ಹೇಳಿದನೋ, ಅದೇ ಬಿಸಿಯಲ್ಲಿ ನನ್ನನ್ನು ತನ್ನೊಂದಿಗೆ ಇಟ್ಟುಕೊಳ್ಳುವ ಅಥವಾ ನನ್ನ ಜೊತೆಗಿರುವ ಬಗ್ಗೆ ಹೇಳುತ್ತಿದ್ದರೆ ಅದು ಸರಿಯೇ, ಇದರಲ್ಲಿ ನನ್ನದೇನು ಅಡ್ಡಿ ಇದೆ?

***

ನಾವು ನಮ್ಮ 'ಸಹಜೀವನ' ಅಂದರೆ ಲೀವ್ ಇನ್ ರಿಲೇಶನ್ ಆರಂಭಿಸಲು ಒಂದು ಹೊಸ ಮನೆಯನ್ನು ಖರೀದಿಸಿದೆವು. ರಿತಿಕ್ ತನ್ನ ಹಳೆಯ ಮನೆಯನ್ನು ಬಿಟ್ಟ, ನಾನು ಸಹ ನನ್ನ ಹಳೆಯ ಮನೆಯನ್ನು ಬಿಟ್ಟೆ. ನಾವಿಬ್ಬರು ಬಾಡಿಗೆಯ ಮನೆಯಲ್ಲಿ ವಾಸಿಸುತ್ತಿದ್ದೆವು, ಹೀಗಾಗಿ ಯಾವುದೇ ಸಮಸ್ಯೆಯಿರಲಿಲ್ಲ. ನಾವು ಹೊಸ ಮನೆಯಲ್ಲಿ ಪಾಲುಗಾರಿಕೆಯ ಗೃಹಸ್ಥಜೀವನವನ್ನು ಆರಂಭಿಸಿದೆವು. ನಿಜ ಹೇಳಬೇಕೆಂದರೆ, ಈ ಗೃಹಸ್ಥ ಜೀವನದಲ್ಲಿ ನಾವು ಗೃಹಸ್ಥರಾಗಿರಲಿಲ್ಲ, ನಮ್ಮ ಪರಿವಾರದವರಿಗೂ ಇದರ ಬಗ್ಗೆ ಮಾಹಿತಿ ಇರಲಿಲ್ಲ. ನಾನು ಅಮ್ಮನಿಗೆ ಏನೂ ಹೇಳಿರಲಿಲ್ಲ. ಬಹುಶಃ ನನಗೆ ಹೇಳಬೇಕೆಂದು ಸಹ ಅನ್ನಿಸಿರಲಿಲ್ಲ. ನನ್ನ ಜೀವನವನ್ನು ನನ್ನದೇ ಆದ ರೀತಿಯಲ್ಲಿ ಸಾಗಿಸುವಲ್ಲಿ ನನಗ್ಯಾವುದೇ ಹಿಂಜರಿಕೆಯಾಗಿರಲಿಲ್ಲ. ರಿತಿಕ್ ಸಹ ಈ 'ಸಹಜೀವನ'ದ ಬಗ್ಗೆ ತನ್ನ ಮನೆಯವರಿಗೆ ವಿಷಯ ತಿಳಿಸುವ ಅವಶ್ಯಕತೆಯನ್ನು ಮನಗಂಡಿರಲಿಲ್ಲ. ಆದರೆ ಕೆಲವು ತಿಂಗಳ ನಂತರ ಯಾರೋ ರಿತಿಕ್‌ನ ತಂದೆಗೆ ಫೋನ್ ಮಾಡಿ, ರಿತಿಕ್ ಒಬ್ಬಳನ್ನು 'ಇಟ್ಟು'ಕೊಂಡಿದ್ದಾನೆ ಎಂದು ಹೇಳಿದ್ದರು. ಅಂದರೆ ನಾನು ರಿತಿಕ್‌ನ 'ಇಟ್ಟುಕೊಂಡ ಹೆಂಗಸು' ಆಗಿದ್ದೆ.

## ಕಳೆದ ಸಂಚಿಕೆಯಲ್ಲಿ



ಸುಗಂಧಾ–ರಿತಿಕ್ ಸಂಬಂಧದ ಬಗ್ಗೆ ಗುಸುಗುಸು ಶುರುವಾದ ಕಾರಣಕ್ಕೆ ಸಿಕರವಾರರು ಮನೆ ಬದಲಾಯಿಸುವ ಸಲಹೆ ನೀಡಿದ್ದನ್ನು ಸುಗಂಧಾ ರಿತಿಕ್ ಜೊತೆ ಚರ್ಚಿಸುತ್ತಾಳೆ. ಯಾರು ಏನೇ ಹೇಳಿದರೂ ಧೈರ್ಯವಾಗಿರಬೇಕು ಎನ್ನುವ ರಿತಿಕ್‌ನ ಮಾತು ಸುಗಂಧಾಗೆ ಇಷ್ಟವಾಗುತ್ತದೆ. ಆದರೆ ಮನೆ ಬದಲಾಯಿಸುವ ನಿರ್ಧಾರ ಮಾಡುತ್ತಾಳೆ. ಸುದೀರ್ಘ ಮಾತುಕತೆ ಬಳಿಕ ಇಬ್ಬರೂ ಮನೆ ಬದಲಾಯಿಸುವುದೇ ಸೂಕ್ತ ಎಂಬ ನಿರ್ಧಾರಕ್ಕೆ ಬರುತ್ತಾರೆ. ಇದೇ ಸಮಯಕ್ಕೆ ನೆರೆಮನೆಯಾಕೆ ಬಂದು ಸುಗಂಧಾ, ಮನೆ ಖಾಲಿ ಮಾಡಬೇಕು ಎಂದು ಮನೆಯ ಮಾಲೀಕ ತಿಳಿಸಿರುವುದಾಗಿ ಹೇಳುತ್ತಾಳೆ. ಕಚೇರಿಯ ಕೀರ್ತಿ ಸಹಾಯದಿಂದ ಬೇರೆ ಮನೆ ಹುಡುಕಿ ಶಿಫ್ಟ್ ಆಗುತ್ತಾರೆ. ಮನೆ ಖಾಲಿ ಮಾಡಿ ಹೊಸ ಮನೆಯಲ್ಲಿ ಸಾಮಾನು ಜೋಡಿಸಲು ರಿತಿಕ್ ಸಹಾಯ ಮಾಡುತ್ತಾನೆ.

ರಿತಿಕ್‌ನ ತಂದೆ ವ್ಯಗ್ರರಾಗಿ ಓಡಿ ಬಂದರು.

ಅವರು ನೇರವಾಗಿ ರಿತಿಕ್‌ನ ಕಚೇರಿಗೆ ಹೋಗಿದ್ದರು. ರಿತಿಕ್ ಅವರನ್ನು ಅಲ್ಲಿ ನೋಡಿ ಆಶ್ಚರ್ಯಗೊಂಡಿದ್ದ. ಏನನ್ನೂ ತಿಳಿಸದೆ ತಂದೆಯವರು ಹೀಗೆ ಕಚೇರಿಗೆ ಬರುವುದು ಆಶ್ಚರ್ಯದ ಸಂಗತಿಯೇ ಆಗಿತ್ತು. ಐದು ಸಹೋದರಿಯರ ನಂತರ ಹುಟ್ಟಿದ್ದ ರಿತಿಕ್ ತನ್ನ ತಂದೆತಾಯಿಗೆ ಆರನೆಯ ಮುದ್ದು ಮಗನಾಗಿದ್ದ. ಆದರೆ ಅವನು ನಂತರದಲ್ಲಿ ತನ್ನ ತಂದೆ ತಾಯಿಯ ಬಗ್ಗೆ ನಿರಂತರವಾಗಿ ಅಸಡ್ಡೆಯನ್ನು ತೋರಿಸಲಾರಂಭಿಸಿದ್ದ. ಬಹುಶಃ ಇದು ಅವರ ಮುದ್ದಿನ ಪರಿಣಾಮವೇ ಆಗಿತ್ತು. ರಿತಿಕ್‌ನ ತಂದೆ ಸದಾ ರಿತಿಕ್‌ನನ್ನು 'ಡಿಫೆನ್ಸ್' ಮಾಡಿದರು: ಈ ವಿಷಯವನ್ನು ಖುದ್ದು ರಿತಿಕ್‌ನೇ ನನಗೆ ಹೇಳಿದ್ದ.

'ಒಮ್ಮೆ ನಾನು ಹೊಡೆತ ತಿನ್ನುವುದರಿಂದ ಪಾರಾದೆ. ನನ್ನ ತರಗತಿಯಲ್ಲಿ ದೀಪ್ತಿ ಎಂಬ ಹುಡುಗಿಯಿದ್ದಳು. ಅವಳು ಸುಂದರವಾಗಿದ್ದಳು. ತರಗತಿಯ ಎಲ್ಲಾ ಹುಡುಗರು ಅವಳಿಗಾಗಿ ಪ್ರಾಣ ಕೊಡಲು ಸಿದ್ಧರಿದ್ದರು. ನಾನೂ ಸಿದ್ಧನಿದ್ದೆ. ಅದೊಂದು ದಿನ ನಾನು ದೀಪ್ತಿಯೊಂದಿಗೆ ಗೆಳೆತನ ಮಾಡಿಕೊಳ್ಳುವುದಾಗಿ ನಿರ್ಧರಿಸಿದೆ. ಅವಳಿಗೆ ಹೆಸರಿಲ್ಲದ ಪ್ರೇಮಪತ್ರಗಳನ್ನು ಬರೆಯಲಾರಂಭಿಸಿದೆ. ಅವಳು ವ್ಯಗ್ರಳಾದಳು. ಒಂದು ದಿನ ನಾನು ಅವಳಿಗೆ, 'ನಿನಗೆ ಪ್ರೇಮ ಪತ್ರ ಯಾರು ಬರೆಯುತ್ತಾರೆಂಬುದು ನನಗೆ ಗೊತ್ತಿದೆ, ನಾನು ಅವನನ್ನು ನೋಡಿಕೊಳ್ಳುತ್ತೇನೆ, ಅವನು ಪ್ರೇಮಪತ್ರ ಬರೆಯುವುದನ್ನು ಮರೆತು ಬಿಡುತ್ತಾನೆ' ಎಂದೆ. ದೀಪ್ತಿ ನನ್ನ ಮಾತುಗಳನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಆದರೆ ನಾನು ಪ್ರೇಮಪತ್ರ ಬರೆಯುವುದನ್ನು ನಿಲ್ಲಿಸಿದೆ; ಎರಡು ದಿನಗಳ ನಂತರ ಅವಳಿಗೆ, 'ಈಗ ನಿನಗೆ ಪ್ರೇಮ ಪತ್ರ ಬರುತ್ತಿದೆಯೇ?' ಎಂದು ಕೇಳಿದೆ. ಅವಳು 'ಇಲ್ಲ' ಎಂದಳು. ಅವಳು ಕ್ರಮೇಣ ನನ್ನ ಬಗ್ಗೆ ಆಕರ್ಷಿತಳಾಗುತ್ತಿದ್ದಳು. ನನ್ನ ಮಿತ್ರನೊಬ್ಬನಿಗೆ ನನ್ನ ಪ್ಲಾನ್ ಹೇಗೋ ತಿಳಿಯಿತು, ಅವನು ದೀಪ್ತಿಗೆ ಎಲ್ಲಾ ವಿಷಯವನ್ನು ತಿಳಿಸಿದ. ನನ್ನ ಅಸಲಿ ಕೆಲಸ ಬಹಿರಂಗವಾಗುತ್ತಲೇ ಅವಳು ಬೆಂಕಿಯಾದಳು, ಅವಳು ನನ್ನ ಬಗ್ಗೆ ತನ್ನ ಸಹೋದರರಿಗೆ ಹೇಳಿದಳು. ಅವರ ಸಹೋದರರು 'ಗೂಂಡಾ' ಟೈಪ್ ವ್ಯಕ್ತಿಗಳಾಗಿದ್ದರು.

ಅವರು ನನ್ನ ತಲೆ ಒಡೆದು, ನನಗೆ ಪಾಠ ಕಲಿಸಲು ಹಾಕಿ ಸ್ಟಿಕ್ ಹಿಡಿದು ನನ್ನನ್ನು ಹುಡುಕಲಾರಂಭಿಸಿದರು. ಅವರ ಭಯದಿಂದ ನಾನು ಕಾಲೇಜಿಗೆ ಹೋಗುವುದನ್ನು ನಿಲ್ಲಿಸಿದೆ. ನಾನು ಕಾಲೇಜಿಗೆ ಹೋಗದಿದ್ದನ್ನು ನೋಡಿ ನನ್ನ ತಂದೆಯವರು ಕಾರಣ ಕೇಳಿದರು. ನಾನು ಹೆದರಿ ಎಲ್ಲವನ್ನೂ ನಿಜನಿಜ ಹೇಳಿದೆ.

ತಂದೆಯವರು ನೇರವಾಗಿ ದೀಪ್ತಿಯ ಮನೆಗೆ ಹೋಗಿ ಅವರ ತಂದೆಗೆ ಗದರಿಸಿದರು, ಇದರಿಂದ ದೀಪ್ತಿಯ ಇಬ್ಬರು ಸಹೋದರರು ಬಂದು ನನ್ನಲ್ಲಿ ಕ್ಷಮೆ ಯಾಚಿಸಿದರು. ದೀಪ್ತಿಯ ಕಾಲೇಜು ಬದಲಾಯಿತು. ರಿತಿಕ್ ತನ್ನ ತಂದೆಗೆ ತನ್ನ ಬಗ್ಗೆ ಇರುವ ಪ್ರೀತಿಯನ್ನು ಗರ್ವದಿಂದ ವರ್ಣಿಸಿದ್ದ. ನನಗೆ ಇದರಲ್ಲಿ ಗರ್ವ ಪಡುವಂಥದ್ದು ಏನೂ ಕಾಣ ಬಂದಿರಲಿಲ್ಲ. ತಪ್ಪು ಕೆಲಸ ಮಾಡುವ ಮಗನನ್ನು ಪಾರು ಮಾಡುವುದು ಗರ್ವದ ಕೆಲಸವೇ ಆಗುವುದಿಲ್ಲ.

'ರಿತಿಕ್, ಈ ವಿಷಯದಲ್ಲಿ ನಿಮ್ಮ ತಂದೆ ನಿನಗೆ ಹೊಡೆಯಬೇಕಿತ್ತು. ನಿಮ್ಮ ತಂದೆ ಗ್ರೇಟ್, ಅವರು ನಿನ್ನ ಪರ ವಹಿಸಿ ನಿನ್ನನ್ನು ಪಾರು ಮಾಡಿದರು', ನಾನು ನಗುತ್ತಾ ರಿತಿಕ್‌ಗೆ ಹೇಳಿದ್ದೆ.

(ಸಶೇಷ)